

# 'ಹೂಡಾ ಜತೆ ಡೇಟಿಂಗ್ ಮಾಡಿಲ್ಲ'

ಕೆಲವು ತಿಂಗಳ ಹಿಂದೆಯಷ್ಟೇ ರಾತ್ರಿ ವೇಳೆ ಲಿಸಾ ಹೇಡನ್ ಮತ್ತು ರಣದೀಪ್ ಹೂಡಾ ರೆಸ್ಟೋರೆಂಟ್ ಒಂದರಲ್ಲಿ ಒಟ್ಟಿಗೆ ಕಾಣಿಸಿಕೊಂಡಿದ್ದರು. ಜತೆಯಾಗಿ ಕಾಣಿಸಿಕೊಂಡರೆ ಕೇಳಬೇಕೇ? ಹೂಡಾ ಮತ್ತು ಹೇಡನ್ ನಡುವೆ ಏನೋ ಇದೆ ಎಂಬ ಗಾಸಿಪ್ ಬಿ–ಟೌನಿನಲ್ಲೆಲ್ಲಾ ಹರಿದಾಡತೊಡಗಿತ್ತು.

ಆದರೆ ಅದೆಲ್ಲಾ ಸುಳ್ಳು ಎಂದು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ ಹೇಡನ್. 'ಈ ಮುಂಚೆ ರಣದೀಪ್ ಹೂಡಾರನ್ನು ಎಂದಿಗೂ ನಾನು ಭೇಟಿ ಆಗಿರಲೇ ಇಲ್ಲ. ವಾಸ್ತವವಾಗಿ ನಾನು ಊಟಕ್ಕೆ ಹೋಗಿದ್ದು ನನ್ನ ಆತ್ಮೀಯರ ಜತೆ. ನಾನು ಹೊರಗಿನಿಂದ ಒಳಗೆ ಬರುವ ವೇಳೆಗೆ ರಣದೀಪ್ ಕೂಡ ಒಳಗೆ ಬಂದರು. ಅದೇ ವೇಳೆ ಯಾರೋ ಫೋಟೊ ಕ್ಲಿಕ್ಕಿಸಿರಬಹುದು. 'ಕ್ವೀನ್' ಚಿತ್ರದ ಗೆಲುವಿನ ಸಂತೋಷ ಆಚರಿಸಲು ಅಲ್ಲಿಗೆ ಹೋಗಿದ್ದು. ಮೊದಲ ಬಾರಿಗೆ ರಣದೀಪ್ ಅವರನ್ನು ಅಲ್ಲಿ ಭೇಟಿಯಾದೆ. ನಾಲ್ವರು ಒಟ್ಟಿಗೆ ಊಟ ಮಾಡಿದೆವು. ನಾವಿಬ್ಬರೂ ಗೆಳೆಯರಲ್ಲ. ಅವರ ಫೋನ್ ನಂಬರ್ ಕೂಡ ನನ್ನ ಬಳಿ ಇಲ್ಲ' ಎಂದು ಲಿಸಾ ಅಲವತ್ತುಕೊಂಡಿದ್ದಾರೆ.

'ನಾನು ನನ್ನ ಕುಟುಂಬ ಮತ್ತು ಪ್ರೀತಿಪಾತ್ರರ ಬಗ್ಗೆ ಕಾಳಜಿ ಹೊಂದಿದ್ದೇನೆ. ಜನರು ನನ್ನ ಬಗ್ಗೆ ಆಡುವ ಕೆಟ್ಟ ಮಾತುಗಳಿಗಿಂತಲೂ ಕೆಟ್ಟದಾಗಿ ನಾನೂ ಮಾತನಾಡಬಲ್ಲೆ!' ಎಂದೂ ಹೇಡನ್ ಕಿಡಿ ಕಾರಿದ್ದಾರೆ.

# 'ಮುತ್ತುರಾಜ'ನ ಸ್ಥಾನಕ್ಕೆ ಕುತ್ತು!



ಬಾಲಿವುಡ್‌ನ 'ಸೀರಿಯಲ್ ಕಿಸ್ಸರ್' ಯಾರು ಎಂದರೆ ಗಲ್ಲಿಯಲ್ಲಿ ಆಡುವ ಪುಟ್ಟ ಮಗುವೂ ಇಮ್ರಾನ್ ಹಶ್ಮಿಯ ಹೆಸರು ಹೇಳಬಲ್ಲದು. ಹಶ್ಮಿಯ ಸಿನಿಮಾವೆಂದರೆ ಅದರಲ್ಲಿ ಚುಂಬನದ ದೃಶ್ಯ ಕಡ್ಡಾಯ. ಆ ಪಟ್ಟವನ್ನು ಒಂದಷ್ಟು ಕಾಲ ಹಶ್ಮಿ ಸಂಭ್ರಮಿಸಿದ್ದರು ಕೂಡ. ಕೊನೆ ಕೊನೆಗೆ ಅತಿಯಾದರೆ ಅಮೃತವೂ ವಿಷ ಎನ್ನುವಂತೆ ಅಧರಾಮೃತದ ರುಚಿ ಅವರಲ್ಲೂ ಬೇಸರ ತರಲಾರಂಭಿಸಿತ್ತು.

ಹಶ್ಮಿ ನಿಧಾನವಾಗಿ ತಮ್ಮ ಇಮೇಜ್‌ನಿಂದ ಕಳಚಿಕೊಳ್ಳಲು ಮುಂದಾಗುತ್ತಿದ್ದಾರೆ. ಇದಕ್ಕೆ ಅವರು ಈ ಹಿಂದೆಯೂ ಪ್ರಯತ್ನಿಸಿದ್ದರು. ಅವರ ಸಿನಿಮಾಗಳ ಯಶಸ್ಸಿಗೆ ಮುತ್ತಿನ ದೃಶ್ಯಗಳೂ ಮುಖ್ಯ ಕಾರಣ. ಆದರೂ ಅವರ ಇತ್ತೀಚಿನ ಚಿತ್ರಗಳು ನೆಲ ಕಚ್ಚಿವೆ. 'ರಷ್', 'ಏಕ್ ಥಿ ಡಾಯಾನ್', 'ಘನ್‌ಚಕ್ಕರ್' ಮತ್ತು 'ರಾಜಾ ನಟವರ್‌ಲಾಲ್' ಚಿತ್ರಗಳಲ್ಲಿ ನಾಯಕಿಯರ ತುಟಿಗೆ ತುಟಿಯೊತ್ತಿದ್ದರು ಇಮ್ರಾನ್ ಹಶ್ಮಿ. ಆದರೂ ಪ್ರೇಕ್ಷಕ ಅದರಿಂದ ಮುದಗೊಳ್ಳಲಿಲ್ಲ. ಅದಕ್ಕೆ ಕಾರಣವನ್ನೂ ಬಿ–ಟೌನ್‌ನ ಪಂಡಿತರು ಪತ್ತೆಹಚ್ಚಿದ್ದಾರೆ. ಅದೇನೆಂದರೆ ಎಲ್ಲರೂ ಕಿಸ್ಸರ್ ಬಾಯ್‌ಗಳಾಗುತ್ತಿರುವುದು.

ನಿಜ. ಹಶ್ಮಿ ಸರಣಿ ಮುತ್ತುಗಳ ಸರದಾರ ಆಗುವ ವೇಳೆ ಅವರಿಗೆ ಯಾವುದೇ ಸ್ಪರ್ಧಿ ಇರಲಿಲ್ಲ. ಆಗೊಬ್ಬ ಈಗೊಬ್ಬರು ಚುಂಬನದ ದೃಶ್ಯಗಳಲ್ಲಿ ಕಾಣಿಸಿಕೊಂಡು ಸುದ್ದಿಯಾದರೂ ಹಶ್ಮಿ ಇಮೇಜ್‌ಗೆ ಸರಿಸಮನಾಗಿ ನಿಲ್ಲುತ್ತಿರಲಿಲ್ಲ. ಈಗ ಕಾಲ ಬದಲಾಗಿದೆ. ಹೆಚ್ಚೂಕಡಿಮೆ ತೆರೆ ಮೇಲೆ ಕಾಣಿಸಿಕೊಳ್ಳುವ ನಟರೆಲ್ಲರೂ ಚುಂಬನದ ಖುಷಿ ಅನುಭವಿಸುತ್ತಿದ್ದಾರೆ! ರಣಬೀರ್ ಕಪೂರ್, ರಣವೀರ್ ಸಿಂಗ್, ಅರ್ಜುನ್ ಕಪೂರ್...ಮಾತ್ರವಲ್ಲ, ತೆರೆ ಮೇಲೆ ಅಪ್ಪಿತಪ್ಪಿಯೂ ಚುಂಬನದ ಸನ್ನಿವೇಶದಲ್ಲಿ ಕಾಣಿಸಿಕೊಳ್ಳುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿದ್ದ ಶಾರೂಖ್ ಖಾನ್ ಸಹ 'ಜಬ್ ತಕ್ ಹೈ ಜಾನ್'ನಲ್ಲಿ ಮೂರು ಬಾರಿ ಕತ್ರೀನಾ ಕೈಫ್‌ರ ತುಟಿಗೆ ತುಟಿಯೊತ್ತಿದ್ದರು. ಯಾರು ಚುಂಬಿಸಿದರೆ ಏನು? ಒಂದೇ ರೀತಿಯಲ್ಲವೇ? ಸಹಜವಾಗಿಯೇ ಇಮ್ರಾನ್ ಹಶ್ಮಿ ಮುತ್ತಿನ ಬೇಡಿಕೆ ಕಳೆದುಕೊಂಡಿದ್ದಾರೆ.

ಹಶ್ಮಿಯ ಅದೃಷ್ಟ ನಾಯಕಿಯರ ತುಟಿಗಳಲ್ಲಿದೆಯೋ, ಸಿನಿಮಾಗಳಲ್ಲೇ ಇದೆಯೋ ಗೊತ್ತಿಲ್ಲ. ಒಟ್ಟಿನಲ್ಲಿ ಹಶ್ಮಿಯ ಪಟ್ಟಕ್ಕೆ ಚ್ಯುತಿ ಬಂದಿರುವುದಂತೂ ದಿಟ.

■ ಅಮಿ